ರೀಅಸಪಾಲ್ಪ್ ಮಾಡುವುದಕ್ಕೆ ನಬಾರ್ಡ್‌ನಲ್ಲಿ ಕೊಡುವುದಿಲ್ಲ, ಇದನ್ನು ಬಿಟ್ಟು ಬೇರೆ ಯಾವುದಾದರೂ ರೀತಿಯಲ್ಲಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು:

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ೧೮೨ನೇ ಪಟ್ಟಿಯಲ್ಲಿರುವ ೨೧೨ ಪ್ರಶ್ನೆಗಳ ಪೈಕಿ ೧೭೬ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಮಾತನಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ನಾವು ನಿಲುವಳಿ ಸೂಚನೆ ಒಂದು ಕಳುಹಿಸಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಬಗ್ಗೆ...

ಅಧ್ಯಕ್ಷರು : ನಾನು ಅದನ್ನು ನೋಡಿದ್ದೇನೆ. ಅದು ಆಡಳಿತಾತ್ಮಕವಾದ ವಿಚಾರವಾಗಿದೆ. ಅದನ್ನು ಬಜೆಟ್‌ನಲ್ಲೂ ಪ್ರಸ್ತಾಪ ಮಾಡಬಹುದು. ಅದನ್ನು ನಾನು ಗಮನ ಸೆಳೆಯುವ ಸೂಚನೆ ಎಂದು ಕನವರ್ಟ್ ಮಾಡಿ, ಅದಕ್ಕೆ ಅವಕಾಶವನ್ನು ಕೊಡುತ್ತೇವೆ. ಈಗ ವಿತ್ತೀಯ ಕಾರ್ಯಕಲಾಪವಾದ ಮೇಲೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ರಸ್ತೆಗಳು ಹಾಳಾಗಿರುವಂಥದ್ದು, ನಮ್ಮೆಲ್ಲರ ಅನುಭವದಲ್ಲಿ ಇರುವಂಥಾದ್ದು, ಆದುದರಿಂದ ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ.

ಅಧ್ಯಕ್ಷರು : ಆಯಿತು, ಈಗ ವಿತ್ತೀಯ ಕಾರ್ಯಕಲಾಪಗಳು ಆದ ತಕ್ಷಣ ಮಧ್ಯಾಹ್ನ ಇದನ್ನು ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ಮುಗಿದ ಮೇಲೆ ನಾವು ಊರಿಗೆ ಹೋಗುವ ಸ್ಥಿತಿಯಲ್ಲಿ ಇಲ್ಲ ಆ ರೀತಿಯಾಗಿದೆ.

ಅಧ್ಯಕ್ಷರು : ನಾನು ಹೇಳುವಂಥಾದ್ದನ್ನು ಕೇಳಿ, ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ರಸ್ತೆಗಳು ಹಾಳಾಗಿದೆ.

ಅಧ್ಯಕ್ಷರು : ನಾನು ರಸ್ತೆಗಳ ಬಗ್ಗೆಯೇ ಗಮನ ಸೆಳೆಯುವ ಸೂಚನೆಯಲ್ಲಿ ತೆಗೆದುಕೊಳ್ಳುತ್ತೇನೆ. ನೀವು ಈಗಲೇ ತೆಗೆದುಕೊಳ್ಳಬೇಕೆಂದು ಹೇಳಿದರೆ ಸರಿಯಲ್ಲ. ನಾನು ಇದಕ್ಕೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ತಾವು ಇದಕ್ಕೆ ಈಗ ಅವಕಾಶವನ್ನು ಕೊಟ್ಟರೆ, ಅದಕ್ಕೆ ಒಂದು ವಿಶೇಷವಾದ ಗಂಭೀರತೆ ಇರುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ತಾವು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾದರೂ ಅವಕಾಶವನ್ನು ಕೊಡಿ. ನೀವು ಅದನ್ನು ಕನವರ್ಟ್ ಮಾಡಿ. ನಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ನೀವು ಈಗ ಇದನ್ನು ನಿಲುವಳಿ ಸೂಚನೆಯಲ್ಲಿ ಕೊಟ್ಟಿರುವಂಥಾದ್ದು, ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಅಂದರೂ ಈಗಲೇ ಕೊಡಿ ಎಂದು ಹೇಳುವುದು. ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ನಾನು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ. ನಾನು ಈ ವಿಷಯಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ ಮೇಲೆ, ನಾನು ಕೊಡುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ತಾವು ಯಾವ ನಿಯಮಾವಳಿಯಲ್ಲಿ ಎಂದು ಹೇಳಿದರೆ, ಆಗುತ್ತದೆ.

ಅಧ್ಯಕ್ಷರು : ಆಯಿತು, ಈಗ ಏನಾಗಿದೆಯೆಂದರೆ, ಯಾವುದೋ ರಸ್ತೆಗಳ ವಿಚಾರವನ್ನು ನೀವು ನಿಲುವಳಿ ಸೂಚನೆಯ ಮೂಲಕ ತರಬಹುದಾ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ರಸ್ತೆ ಎಂದರೆ ಹೇಗೆ? ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು : ಆಯಿತು, ನಾನು ಕೇಳುವಂಥಾದ್ದು ಅತ್ಯಂತ ಗಂಭೀರವಾದದ್ದು, ಇತ್ತೀಚೆಗೆ ನಡೆದಿರುವಂತಹ ಘಟನೆಗಳ ಬಗ್ಗೆ ತಾವು ನಿಲುವಳಿ ಸೂಚನೆಯನ್ನು ಕೇಳಬೇಕು. ಅದನ್ನು ಬಿಟ್ಟು this is not correct.

ನಾನು ಇದನ್ನು ಅಲೋ ಮಾಡುವುದಿಲ್ಲ, ಇನ್ನು ಬೇರೆಯದಕ್ಕೆ ಫಿಕ್ಸ್ ಅಪ್ ಮಾಡುತ್ತೇನೆ. ಈಗ ದಯಮಾಡಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ಮಾತನಾಡಿ. ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ, ತಮಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಸಹಕರಿಸಬೇಕು. ನಾನು ರೂಲ್ ೭೩ನಲ್ಲಿ ಗಮನ ಸೆಳೆಯುವ ಸೂಚನೆಯ ಮೇಲೆ ನಿಮಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ರಸ್ತೆಗಳು ಯಾವುದೇ ಇರಬಹುದು ಜಿಲ್ಲಾ ರಸ್ತೆಗಳು ಇರಬಹುದು. ಎಲ್ಲಾ ರಸ್ತೆಗಳು ಹಾಳಾಗಿ ಹೋಗಿರುವಂತಹ, ಇಷ್ಟು ಗಂಭೀರವಾದ ವಿಷಯವನ್ನು ಸರ್ಕಾರವಂತೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ನಾವು ನಿಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು : ದಯಮಾಡಿ ತಾವು ಈ ರೀತಿ ಮಾಡುವುದು ಸರಿಯಲ್ಲ, ಈಗ ಅವಸರ ಅವಸರವಾಗಿ ಪ್ರಶ್ನೋತ್ತರವನ್ನು ಮುಗಿಸಿದ್ದೇನೆ. ನಾವು ಈ ರೀತಿ ಕಾಲ ವ್ಯಯ ಮಾಡುವುದು ಬೇಡ. ನಾನು ಅವಕಾಶವನ್ನು ಮಾಡಿಕೊಡುತ್ತೇನೆಂದು ..... ಯವರನ್ನು ಮಾತನಾಡಲು ಕರೆದಿದ್ದೇನೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಾವು ನಿಜವಾಗಿಯೂ ಕೂಡ ಸರಿಯಾದಂತಹ ಅಭಿಪ್ರಾಯವನ್ನು ಕೊಟ್ಟಿದ್ದೀರಿ. ಈಗ ೬೦ನೇ ನಿಯಮಾವಳಿಯ ಪ್ರಕಾರ, ಇವರು ನಿಲುವಳಿ ಸೂಚನೆಯಲ್ಲಿ ತರಲು ಯಾವ ರೀತಿಯಿಂದಲೂ ಸಾಧ್ಯವಿಲ್ಲ. ಅದು ಅನುಕೂಲವಾಗುತ್ತದೆಂಬುದು ಅಲ್ಲ. ತಾವು ಕೂಡ ಅಪ್ಪಣೆ ಕೊಡಿಸಿದ್ದೀರಿ. ಇದನ್ನು ಬೇರೊಂದು ರೂಪದಲ್ಲಿ ಚರ್ಚೆ ತೆಗೆದುಕೊಳ್ಳಬಹುದೆಂದು ಹೇಳಿದ್ದೀರಿ. ಆ ದೃಷ್ಟಿಕೋನದಿಂದ, ತಾವು ದಯವಿಟ್ಟು ನಿಲುವಳಿ ಸೂಚನೆಯನ್ನು ತಿರಸ್ಕರಿಸಬೇಕು. ತಾವು ತಮಗೆ ವಿವೇಚನೆಗೆ ಬಿಟ್ಟಂತೆ, ಬೇರೆ ರೀತಿಯಲ್ಲಿ ಅದನ್ನು ಇವತ್ತು ಆಗಲಿ, ಅಥವಾ ನಾಳೆಯಾಗಲಿ, ಇದರ ಬಗ್ಗೆ ಚರ್ಚೆಯಾಗುವಂಥಾದ್ದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕು.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಸರ್ಕಾರ ಕೆಲಸ ಮಾಡುವುದಕ್ಕೆ ಆಗದೇ ಇರುವಂಥಾದ್ದಕ್ಕೆ, ನಿಯಮಾವಳಿ ರಕ್ಷಣೆಯನ್ನು ತೆಗೆದುಕೊಳ್ಳಬಾರದು.

ಅಧ್ಯಕ್ಷರು : ಈಗ ನಾನು ನೀವು ಕೊಟ್ಟಿರುವಂತಹ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ. ನಾನು ನಿಮಗೆ ರೂಲ್ ೭೩ರಲ್ಲಿ ಮಾತನಾಡಲು ಅವಕಾಶವನ್ನು

ಕೊಡುತ್ತೇನೆಂದು ಹೇಳಿದ್ದೇನೆ. Are you questioning my ruling?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಇಡೀ ಸದನದ ಸದಸ್ಯರು ಊರಿಗೆ ಹೋಗುವ ಹಾಗೆ ಇಲ್ಲ, ಜಿಲ್ಲಾ ಪರಿಷತ್ತು ರಸ್ತೆಗಳು ಹೊಂಡ ಬಿದ್ದು, ಇವತ್ತು ಸಾಕಷ್ಟು ಹಾಳು ಬಿದ್ದು ಹೋಗಿವೆ. ಕಳೆದ ೧೦ ತಿಂಗಳಲ್ಲಿ ಸರ್ಕಾರಕ್ಕೆ ಒಂದು ಹೊಂಡವನ್ನು ಮುಚ್ಚುವುದಕ್ಕೆ ಆಗಿಲ್ಲ, ನಾವು ಸರ್ಕಾರದ ಗಮನ ಸೆಳೆಯದೇ ಇನ್ನು ಏನು ಮಾಡಬೇಕು?

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ, ಅದರ ಗಂಭೀರತೆಯ ವಿಷಯವನ್ನು ತಿಳಿಸಬೇಕಾಗುತ್ತದೆ.

ಅಧ್ಯಕ್ಷರು : ನಾನು ಅವಕಾಶವನ್ನು ಕೊಡುತ್ತೇನೆ, ತಾವು ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಇದನ್ನು ನಿಯಮ ೬೯ರ ಮೇಲೆ ತೆಗೆದುಕೊಳ್ಳುವುದಕ್ಕೆ ಬದಲಾವಣೆ ಮಾಡಿ, ನೀವು ಇದನ್ನು ಗಮನ ಸೆಳೆಯುವುದು ಎಂದರೆ ಹೇಗೆ?

ಅಧ್ಯಕ್ಷರು : ನಾನು ಅವಕಾಶವನ್ನು ಕೊಡುತ್ತೇನೆ, ತಾವು ದಯವಮಾಡಿ ಕುಳಿತುಕೊಳ್ಳಿ.

ವಿತ್ತೀಯ ಕಾರ್ಯಕಲಾಪ

೨೦೦೫-೦೬ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಸಾಮಾನ್ಯ ಚರ್ಚೆ

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ತಾವು ನನ್ನನ್ನು ೨೦೦೫-೦೬ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಕರೆದದ್ದಕ್ಕೆ ತಮಗೆ ವಂದನೆಯನ್ನು ಸಲ್ಲಿಸುತ್ತೇನೆ. ಸದನದಲ್ಲಿ ಇಷ್ಟು ಹೊತ್ತು ಮಾನ್ಯ ಉಪ ಮುಖ್ಯ ಮಂತ್ರಿಯವರು ಇದ್ದರು ಈಗ ಇಲ್ಲ, ಇದರ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಓಟ್ ಆನ್ ಅಕೌಂಟ್ ಅನ್ನು ತೆಗೆದುಕೊಳ್ಳುವಂಥಾದ್ದು, ಇದು ಪ್ರಾಯಶಃ ಹೊಸ ಸರ್ಕಾರ ಬಂದಾಗ, ಒಂದು ಬಾರಿ ಸರಿಯೆಂದು ಕಾಣುತ್ತದೆ. ಪ್ರತಿ ಬಾರಿಯೂ ಓಟ್ ಆನ್ ಅಕೌಂಟ್ ಅನ್ನು ತೆಗೆದುಕೊಳ್ಳುವಂಥಾದ್ದು, ಮತ್ತೆ ಸರ್ಕಾರ ಹೋಗುವಾಗ, ಮತ್ತೆ ಪುನಃ ಇನ್ನೊಂದು ಬಜೆಟ್ ಮೇಲೆ ಚರ್ಚೆಯಾಗುವಂಥಾದ್ದು, ಈ ಒಂದು ಪರಿಪಾಠ ಇದು ತಪ್ಪು ಎಂದು ನನ್ನ ಅಭಿಪ್ರಾಯವಾಗಿದೆ. ಈಗ ಅವಕಾಶವಿದೆ, ರಾಜ್ಯಪಾಲರ ಭಾಷಣ ಪ್ರಾರಂಭವಾದ ಮೇಲೆ, ಸ್ವಲ್ಪ ದಿವಸಗಳಾದ ಮೇಲೆ, ಅದನ್ನು ಕಂಟಿನ್ಯೂ ಮಾಡಬಹುದು.